ಅಸಲು ದಾವೆ ಸಂಖ್ಯೆ - 312/2018
ಡಿ.ಡಬ್ಲ್ಯೂ - 03
ದಿನಾಂಕಃ 13-11-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ</u>**

ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ನಮ್ಮ ಅಣ್ಣರವರು ಓದಿ ತಿಳಿಸಿದ್ದಾರೆ ಅವರು ಬರೆಸಿದ ಹಾಗೆ ನೀವು ನಿಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಿಮಗೆ ಏನುಆಗಬೇಕು ಎಂದರೆ ಖಾಸಾ ಅಣ್ಣ ಆಗಬೇಕು. ವಾದಿ ತಂಗಿಯಾಗಬೇಕು. ವಾದಿಯ ಶಾಲೆಯ ದಾಖಲಾತಿಯನ್ನು ನಿವೇನಾದರೂ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಮತ್ತು ವಾದಿಗೆ ಎಷ್ಟು ವರ್ಷ ವಯಸ್ಸಿನ ಅಂತರ ಇದೆ ಎಂದರೆ ಸುಮಾರು 4-5 ವರ್ಷದ ಅಂತರ ಇರಬಹುದು. ವಾದಿಯು ಎಲ್ಲಿ ಹುಟ್ಟದರು ಎಂದರೆ ಬಂಕಾಪುರದಲ್ಲಿ ಹುಟ್ಟಿರುತ್ತಾರೆ. ವಾದಿಯು ಬಂಕಾಪುರದಲ್ಲಿ ಹುಟ್ಟಿದ ಬಗ್ಗೆ ನಿಮಗೆ ಸರಿಯಾದ ಮಾಹಿತಿ ಇದೆಯಾ ಎಂದರೆ ಇದೆ. ಆವಾಗ ನಿಮಗೆ ಎಷ್ಟು ವರ್ಷ ಇತ್ತು ಎಂದರೆ 7-8 ವರ್ಷ ಇದ್ದೇನು. ವಾದಿಯು ಯಾವಾಗ ಹುಟ್ಟಿದಳು ಎಂದು ನನಗೆ ಗೊತ್ತಿಲ್ಲ. ಅವರು ಹುಟ್ಟಿದ ಎಷ್ಟು ದಿನಕ್ಕೆ ನೀವು ತವರಮೆಳ್ಳಿಹಳ್ಳಿ ಗ್ರಾಮಕ್ಕೆ ಬಂದಿರುತ್ತೀರಿ ಎಂದರೆ ಅವಳು ಹುಟ್ಟಿದ ಎರಡು ವರ್ಷದ ಬಳಿಕ ವಾದಿ ಮತ್ತು ನಾನು ಇಬ್ಬರು ನಮ್ಮ ದೊಡ್ಡಪ್ಪನಾದ ಚನ್ನಬಸಪ್ಪನ ಮನೆಗೆ ಬಂದು ನಾವು ನಮ್ಮ ತಂದೆ - ತಾಯಿಯವರು ಬೇರೆ ಇದ್ದೇವು. ಬೇರೆ ಇದ್ದೇವು ಎಂದರೆ ಮುಂದುಗಡೆ ಮನೆಯಲ್ಲಿ ನಾವು ಇದ್ದೆವು. ಹಿಂದುಗಡೆ ಮನೆಯಲ್ಲಿ ದೊಡ್ಡಪ್ಪ ರವರು ಇದ್ದರು. ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದರು ಎಂದರೆ ನಾನು, ನಮ್ಮ ಅಣ್ಣ ಪ್ರತಿವಾದಿ,ವಾದಿ ಮತ್ತು ನಮ್ಮ ತಂದೆ-ತಾಯಿಯರು ಇದ್ದೆವು. ನಮ್ಮ ದೊಡ್ಡಪ್ಪನ ಮನೆಯಲ್ಲಿ ನಮ್ಮದೊಡ್ಡಪ್ಪ ಮತ್ತು ಅವರ ಹೆಂಡತಿ ಇದ್ದರು.

ಬಂಕಾಪುರದ ಮನೆಯನ್ನು ಬಿಟ್ಟು ನೀವು ತವರಮೆಳ್ಳಿಹಳ್ಳಿ ಗ್ರಾಮಕ್ಕೆ ಏಕೆ ಹೋಗಿ ವಾಸವಾಗಿದ್ದೀರಿ ಎಂದರೆ ನಮ್ಮ ದೊಡ್ಡಪ್ಪನಾದ ಚೆನ್ನಬಸಪ್ಪ ರವರಿಗೆ ಮಕ್ಕಳು ಆಗಿರಲಿಲ್ಲ ಆದಾಕಾರಣ ನಾವು ಹೋಗಿರುತ್ತೇವೆ. ನಿಮ್ಮ ದೊಡ್ಡಮ್ಮಳಾದ ಗಂಗವ್ವ ರವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಅವರು ಆರೋಗ್ಯವಾಗಿ ಇದ್ದರು. ವಾದಿಯ ಜನನ ಪ್ರಮಾಣ ಪತ್ರದಲ್ಲಿ ಹಾಗೂ ಶಾಲಾ ದಾಖಲಾತಿಯಲ್ಲಿ ಅವರ ತಂದೆಯ ಹೆಸರು ಚನ್ನಬಸಪ್ಪ ಅಂತಾ ದಾಖಲು ಇದೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಯಾರು ದಾಖಲು ಮಾಡಿದರು ಎಂದುನಿಮಗೆ ಗೊತ್ತಿಲ್ಲ ಎಂದರೆ ಸರಿ. ಚನ್ನಬಸಪ್ಪ ಮತ್ತು ನಾಗವ್ವ ರವರು ಕೂಡಿ ವಾದಿಯು ಅವರಿಗೆ ಹುಟ್ಟಿದ್ದಾರೆ

ಎಂದು ದಾಖಲು ಮಾಡಿಸಿದ್ದಾರೆ ಎಂದರೆ ಸುಳ್ಳು ಇರುತ್ತದೆ. ವಾದಿಯು ಯಾರಿಗೆ ಹುಟ್ಟಿದ್ದಾರೆ ಎಂದು ನಿಮ್ಮ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಚೆನ್ನಪ್ಪ ರವರಿಗೆ ಹುಟ್ಟಿರುತ್ತಾರೆ. ವಾದಿಯು ಚನ್ನೆಪ್ಪ ರವರಿಗೆ ಹುಟ್ಟಿದ್ದಾರೆ ಎಂದು ನಿಮ್ಮ ಬಳಿ ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮಕ್ಕಳು ಯಾರಿಗೆ ಹುಟ್ಟಿರುತ್ತಾರೋ ಅವರ ತಂದೆಯ ಹೆಸರು ಹೇಳುತ್ತಾರೆ ಎಂದರೆ ಸರಿ. ಆ ರೀತಿ ವಾದಿಯು ಚನ್ನಬಸಪ್ಪ ರವರಿಗೆ ಹುಟ್ಟಿದ ಕಾರಣ ಅವರ ತಂದೆಯ ಹೆಸರು ಚನ್ನಬಸಪ್ಪ ಎಂದು ನುಡಿಯುತ್ತಾರೆ ಎಂದರೆ ಸುಳ್ಳು ಇರುತ್ತದೆ.

ನಿಮ್ಮ ಮದುವೆ ಎಲ್ಲಿ ಆಯಿತು ಎಂದರೆ ತವರಮೆಳ್ಳಿಹಳ್ಳಿ ಗ್ರಾಮದಲ್ಲಿ ಪ್ರತಿವಾದಿ ಮಾಡಿ ಕೊಟ್ಟಿರುತ್ತಾರೆ. ನಿಮ್ಮಮದುವೆಯಾದಾಗ ಚನ್ನಪ್ಪ ಮತ್ತು ಚನ್ನಬಸಪ್ಪ ಜೀವಂತ ಇದ್ದರು ಎಂದರೆ ಸರಿ. ಅವರು ನಿಮ್ಮ ಮದುವೆ ಮಾಡಿಕೊಟಿಲ್ಲ ಎಂದರೆ ನಮ್ಮ ತಂದೆ-ತಾಯಿ ಮತ್ತು ಅಣ್ಣ ಕೂಡಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ಗಂಡನ ಮನೆಗೆ ಹೋದಿರಿ ಎಂದರೆ ಸರಿ. ನೀವು ಗಂಡನ ಮನೆಗೆ ಹೋದಾಗ ವಾದಿಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ವಾದಿಯು ಶಾಲೆಗೆ ಹೋಗಿತ್ತಿದ್ದಳು. ಆಗ ವಾದಿಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಎಷ್ಟು ವರ್ಷ ತವರಮೆಳ್ಳಿಹಳ್ಳಿ ಗ್ರಾಮದ ಶಾಲೆಗೆ ಹೋದಳು ಎಂದರೆ 7 ನೇ ತರಗತಿಯವರೆಗೆ ಹೋಗಿರುತ್ತಾಳೆ. ಅ ವೇಳೆಯಲ್ಲಿ ವಾದಿಯನ್ನು ಬಂಕಾಪುರದ ಶಾಲೆಗೆ ಸೇರಿಸಿ ಅವರ ತಂದೆಯ ಹೆಸರು ಚೆನ್ನಪ್ಪ ಎಂದು ದಾಖಲು ಮಾಡಲು ನಿಮಗೆನೂ ತೊಂದರೆ ಇರಲಿಲ್ಲ ಎಂದರೆ ಆಗ ಬಡತನ ಇತ್ತು ಎಂದು ನುಡಿಯುತ್ತಾರೆ.

ವಾದಿಯ ಮದುವೆಯನ್ನು ಯಾರು ಮಾಡಿದರು ಎಂದರೆ ಚನ್ನಪ್ಪ, ಚನ್ನಬಸಪ್ಪ, ಅವರು ಹೆಂಡತಿಯರು ಮತ್ತು ಪ್ರತಿವಾದಿ ಕೂಡಿ ಮಾಡಿರುತ್ತಾರೆ. ನೀವು ಎಷ್ಟು ಜನ ಮಕ್ಕಳು ಎಂದರೆ ಮೊದಲು ಪ್ರತಿವಾದಿ, ನಂತರ ನಾನು, ಆಮೇಲೆ ವಾದಿ ಇರುತ್ತಾರೆ.

ಗಂಗವ್ವ ರವರಿಗೆ ಹುಷಾರು ಇಲ್ಲದೆ ಇದ್ದ ಕಾರಣ ನಾಗವ್ವ ರವರು ಅಲ್ಲಿಗೆ ಹೋಗಿ ಅವರನ್ನು ಉಪಚರಿಸುತ್ತಿದ್ದರು ಎಂದರೆ ಸರಿಯಲ್ಲ. ಚನ್ನಬಸಪ್ಪ ನಾಗವ್ವ ರವರಿಂದ ವಾದಿಯು ಜನಿಸಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಷ್ಟು ಇತ್ತು ಎಂದರೆ 2 ಎಕರೆ ಚಿಲ್ಲರೆ ಇರುತ್ತದೆ. ನಾನು ದಾವಾ ಆಸ್ತಿಯನ್ನು ನೋಡಿದ್ದೇನೆ. ಅದನ್ನು ಯಾರು ಸಾಗುವಳಿ ಮಾಡುತ್ತಿದ್ದರು ಎಂದರೆ ಪ್ರತಿವಾದಿ ಮಾಡುತ್ತಿದ್ದನು. ನೀವು ನಿಮ್ಮ ಗಂಡನ ಮನೆಯಲ್ಲಿ ಇದ್ದ ಕಾರಣ ದಾವಾ ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಾಖಲು ಮಾಡುವವರೆಗೂ ವಾದಿ ಮತ್ತು ಅವರ ಗಂಡ ಸಾಗುವಳಿ ಮಾಡುತ್ತಿದ್ದರು ಎಂದರೆ ಪ್ರತಿವಾದಿಯೇ ಸಾಗುವಳಿ

ಮಾಡುತ್ತಿದ್ದರು. ಪ್ರತಿವಾದಿಯು ದತ್ತಕ ಆದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇದೆ. ಯಾವಗ ಅವರು ದತ್ತಕ ಆದರು ಎಂದರೆ ನನಗೆ ಮಾಹಿತಿ ಇಲ್ಲ. ಆದರೆ ಅವರಿಗೆ ಆಗ ಮದುವೆ ಆಗಿತ್ತು. ಪ್ರತಿವಾದಿಯು ಮದುವೆಯಾದ ಎಷ್ಟು ವರ್ಷಕ್ಕೆ ದತ್ತಕ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದಾಗ ಪ್ರತಿವಾದಿಯು ನೌಕರಿಗೆ ಹೋಗುತ್ತಿದ್ದನಾ ಎಂದರೆ ಹೋಗುತ್ತಿದ್ದನು. ಪ್ರತಿವಾದಿಯ ದತ್ತಕವನ್ನುಎಲ್ಲಿ ಮಾಡಿದ್ದರು ಎಂದರೆ ಸವಣೂರಿನ ನೊಂದಣಿ(sub register) ಕಚೇರಿಯಲ್ಲಿ ಮಾಡಿದ್ದರು. ಅದಕ್ಕಿಂತ ಪೂರ್ವದಲ್ಲಿ ಎಲ್ಲಿಯೂ ದತ್ತಕ ಮಾಡಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.ದತ್ತಕ ಆದಾಗ ಮನೆಯಲ್ಲಿ ಏನಾದರೂ ಕಾರ್ಯಾಕ್ರಮ ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ದತ್ತು ಪಡೆಯುವ ವೇಳೆಯಲ್ಲಿ ಸಂಬಂಧಿಕರನ್ನು ಕರೆಯುತ್ತಾರೆ ಎಂದರೆ ಸರಿ. ಪ್ರತಿವಾದಿಯು ದತ್ತಕವಾಗುವ ವೇಳೆಯಲ್ಲಿ ನೀವೆನಾದರೂ ಸವಣೂರಿನ sub register ಕಚೇರಿಗೆ ಬಂದಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಚನ್ನಬಸಪ್ಪನ ಮಗಳು ಎಂದು ನಿಮಗೆ ಮತ್ತು ಪ್ರತಿವಾದಿಗೆ ಗೊತ್ತು ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಪ್ರತಿವಾದಿಯು ನಿಮಗೆ ಆಸ್ತಿ ಕೊಡಬಹುದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಚನ್ನಪ್ಪ ರವರಿಗೆ ಹುಟ್ಟಿದ ಕಾರಣ ಚನ್ನಪ್ಪ ನಿಮ್ಮ ತಂದೆ ಎಂದು ಹೇಳುತ್ತೀರಿ ಎಂದರೆ ನಾವು ಮೂರು ಜನ ಚನ್ನಪ್ಪನಿಗೆ ಹುಟ್ಟಿರುತ್ತೇನೆ. ಪ್ರತಿವಾದಿಯು ತನ್ನ ಜನಕ ತಂದೆಯ ಹೆಸರು ಚನ್ನಪ್ಪ ಎಂದು ಹೇಳುತ್ತಾರೆ ಎಂದರೆ ಸರಿ. ವಾದಿಯು ಚನ್ನಬಸಪ್ಪ ರವರಿಗೆ ಹುಟ್ಟಿದ ಕಾರಣ ಅವರ ತಂದೆಯ ಹೆಸರು ಚನ್ನಬಸಪ್ಪ ಎಂದು ನುಡಿಯುತ್ತಾರೆ ಎಂದರೆ ಸುಳ್ಳು ಇರುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ಮತ್ತು ನಿಮಗೆ ವೈ ಮನಸ್ಸು ಇರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.